ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ರಿಸರ್ವ್ ಬ್ಯಾಂಕ್ ಒಪ್ಪಿದ ಮೇಲೆ ಹೊಸದಾಗಿ ಜಿಲ್ಲಾ ಮಧ್ಯವರ್ತಿ ಸಹಕಾರ ಬ್ಯಾಂಕ್ ತೆರೆಯಲಿಕ್ಕೆ ಈಗಿದ್ದ ಕಾನೂನಿನಲ್ಲೇ ಅವಕಾಶ ಇದೆ. ಅದು ಯಾವುದು ಎಂಬುದನ್ನು ನಾನು ಸರ್ಕಾರಕ್ಕೆ ಹೇಳುತ್ತೇನೆ. ಅದರ ಪ್ರಕಾರ ಸರ್ಕಾರ ಮಾಡಲಿ.

ಶ್ರೀ ಡಿ.ಕೆ. ಶಿವಕುಮಾರ್ : ಅದು ಯಾವುದು ಎಂಬುದನ್ನು ಹೇಳಿ ನೋಡೋಣ.

ಶ್ರೀ ಎಸ್ .ಎಸ್.ಪಾಟೀಲ್ : ಕಾನೂನನ್ನು ನೋಡಿ ನಾನು ಅದನ್ನು ಹೇಳುತ್ತೇನೆ. ಈಗಿದ್ದ ಕಾನೂನಿನಲ್ಲೇ ಅವಕಾಶ ಇದೆ. ನೀವು ತರಲು ಉದ್ದೇಶಿಸಿರುವ ತಿದ್ದುಪಡಿ ಇರತಕ್ಕ ವ್ಯವಸ್ಥೆಯನ್ನು ಹಾಳು ಮಾಡಲು ಅವಕಾಶ ನೀಡುವಂತಾದ್ದು ಆಗಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಿವಿಧ ವಿಭಾಗೀಯ ಕಛೇರಿಗಳ ಆಡಳಿತ ನಿರ್ವಹಣೆ.

119 (912) ಶ್ರೀ ಸಭಾಪತಿ ಯು. ಆರ್. (ಉಡುಪಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ವಿವಿಧ ವಿಭಾಗೀಯ ಕಛೇರಿಗಳು ಯಾವುವು?

ಆ) ಈ ವಿವಿಧ ವಿಭಾಗೀಯ ಕಛೇರಿಗಳು 1999-2000 , 2000-2001ನೇ ಸಾಲಿನಲ್ಲಿ ಮಾಡಿರತಕ್ಕ ಲಾಭ ಮತ್ತು ನಷ್ಟ ಏನು? (ವಿವರಗಳನ್ನು ನೀಡುವುದು)

ಇ) ನಷ್ಟಕ್ಕೊಳಪಟ್ಟ ವಿಭಾಗೀಯ ಕಛೇರಿಗಳ ಆಡಳಿತದಲ್ಲಿ ಲೋಪ ದೋಷಗಳಿವೆಯೆ; ಲಾಭಗಳೇಸಲು ಸರಕಾರ ನಡೆಸಿರುವ ಪ್ರಯತ್ನ ಗಳೇನು?

ಶ್ರೀ. ಸಿ. ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು 4 ನಿಗಮ ಗಳನ್ನಾಗಿ ವಿಭಜಿಸಲಾಗಿರುತ್ತದೆ.

1) ಕರ್ನಾಟಕ ವಿಭಜಿಲಾಗಿರುತ್ತದೆ.

2) ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ.

3) ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ

4) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ.

ಆ) 1999-2000 ನೇ ಸಾಲಿನಲ್ಲಿ ಅಂತಿಮಗೊಳಿಸಲಾದ ಲೆಕ್ಕಪತ್ರಗಳ ಪ್ರಕಾರ ನಿಗಮವಾರು ಲಾಭ ನಷ್ಟದ ವಿವರವನ್ನು ಈ ಕೆಳಗೆ ನೀಡಲಾಗಿದೆ.

(ರೂ. ಲಕ್ಷಗಳಲ್ಲಿ)

ಸಂಸ್ಥೆ	ಲಾಭ:ನಷ್ಟ
ಕ. ರಾ. ರ. ಸಾ. ಸಂಸ್ಥೆ	- 1514.78
ವಾ. ಕ. ರ. ಸಾ. ಸಂಸ್ಥೆ	276.28
ಬೆಂ. ಮ. ನ. ಸ. ಸಾ. ಸಂಸ್ಥೆ	210.59

ಎ) ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಸೇರಿದಂತೆ ಈ ನಿಗಮಗಳ 2000-2001ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳು ಮಾರ್ಚ್ 2001 ರ ನಂತರ ಅಂತಿಮಗೊಳಿಸಲಾಗುವುದರಿಂದ 2000-01ರ ಮಾಹಿತಿಯು ಲಭ್ಯವಿರುವುದು.

ಇ) ಸಂಸ್ಥೆಯ ಕಾರ್ಯಾಚರಣೆಯನ್ನು ಸುಧಾರಿಸಿ, ನಷ್ಟದ ಪ್ರಮಾಣವನ್ನು ಕಡಿಮೆ ಮಾಡಿ ಲಾಭದತ್ತ ಮುಂದುವರೆಯಲು ಸಂಸ್ಥೆಯು ಹಲವಾರು ಪರಿಣಾಮಕಾರಿ ಕ್ರಮಗಳನ್ನು ಜರುಗಿಸಿದ್ದು, ವಿವರಗಳು ಈ ಕೆಳಕಂಡಂತಿವೆ.

1) ಆಧುನಿಕ ಪಿ-5,000 ಶ್ರೇಣಿಯ ''ಅಲ್ಟಾ ಡೀಲಕ್ಸ್ ಪ್ಲಸ್'' ಬಸ್ಸುಗಳ ಅಳವಡಿಕೆ.

2) ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ 29-40 ಕಿ.ಮೀ. ಗಳವರೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಎರಡು ಬಾಗಿಲುಗಳ ಬಸ್ಸುಗಳ ಕಾರ್ಯಾಚರಣೆ.

3) ಮುಂಗಡ ಕಾಯ್ದಿರಿಸುವಿಕೆ ಟಿಕೇಟುಗಳನ್ನು ಹೊಂದಿದವರಿಗೆ ಅವರ ಮನೆಯಿಂದ ಬಸ್ಸು ನಿಲ್ದಾಣಗಳಿಗೆ ನಗರ ಸಾರಿಗೆಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಸೌಲಭ್ಯ.

4) ಗ್ರಾಮಾಂತರ ಬಸ್ಸುಗಳಲ್ಲಿ 11 ಹಂತಗಳವರೆಗೆ ಪ್ರಯಾಣಿಸುವ ಪ್ರಯಾಣಿಕರಿಗೆ ಮಾಸಿಕ ಬಸ್ಸು ಪಾಸುಗಳ ಸೌಲಭ್ಯ.

5) ಗಣಕೀಕೃತ ಮ್ಯಾನ್ಯುಯಲ್ ಮುಂಗಡ ಕಾಯ್ದಿರಿಸುವಿಕೆ ಕೌಂಟರ್‌ಗಳ ಸ್ಥಾಪನೆ.

6) ಒಂದು ವಾರದ ಮಟ್ಟಿಗೆ ಉರ್ಜಿತವಾಗಿರುವ ಸ್ವಾತಂತ್ರ್ಯದ ಟಿಕೇಟುಗಳು (ಬೇಕಾದಲ್ಲಿ ಸಂಚರಿಸಿ).

7) ಶಾಲೆಗಳಿಗೆ ಗುತ್ತಿಗೆ ಆಧಾರದ ಮೇಲೆ ಬಸ್ಸುಗಳನ್ನು ನೀಡುವ ಮಾದರಿಯಲ್ಲಿ ಸಂಬಂಧಪಟ್ಟ ಶಾಲೆಗಳ ಆಡಳಿತ ವರ್ಗದಿಂದ ಮಾನ್ಯ ಪಡೆದ ಪೋಷಕರ ಸಂಘ ಅಥವಾ ಇತರೆ ಸಂಘಗಳಿಗೆ ಗುತ್ತಿಗೆ ಆಧಾರದ ಮೇಲೆ ಬಸ್ಸುಗಳನ್ನು ನೀಡಲು ಅವಕಾಶ ಮಾಡಿಕೊಡಲಾಗಿದೆ.

8) ಜನದಟ್ಟಣೆ ಕಡಿಮೆ ಇರುವ ಅವಧಿಯಲ್ಲಿ (ಜುಲೈ, ಆಗಸ್ಟ್, ಹಾಗೂ ಸೆಪ್ಟೆಂಬರ್) ಎಲ್ಲಾ ಬಸ್ಸುಗಳಲ್ಲಿ ಸಾಂಧರ್ಬಿಕ ಒಪ್ಪಂದದ ದರಗಳಲ್ಲಿ ಪ್ರತಿ ಕಿ.ಮೀ.ಗೆ ರೂ.2.00ರಂತೆ ಕಡಿಮೆ ಮಾಡಲಾಗಿದೆ. ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಸಾಮಾನ್ಯವಾಗಿ ವಿಧಿಸುವ ದರಗಳಲ್ಲಿ ರೂ. 1-00ರಂತೆ ಕಡಿಮೆ ದರ ವಿಧಿಸಲಾಗುವುದು.

9) ಹೆಚ್ಚು ಜನ ಪ್ರಯಾಣಿಕರನ್ನು ಆಕರ್ಷಿಸುವ ದೃಷ್ಟಿಯಿಂದ ಕಡಿಮೆ ಜನದಟ್ಟಣೆ ಅವಧಿಯಾದ ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರ್, ತಿಂಗಳಿನಲ್ಲಿ ಸಾಮಾನ್ಯ ಜನದಟ್ಟಣೆ ತಿಂಗಳುಗಳಲ್ಲಿ (ನವೆಂಬರ್, ಡಿಸೆಂಬರ್, ಜನವರಿ, ಫೆಬ್ರವರಿ, ಮಾರ್ಚ್) ವಿಧಿಸುವ ದರಗಳ ಮೇಲೆ ಶೇಕಡ 1 ರಂತೆ ಕಡಿಮೆ ಮಾಡಿ ದರ ವಿಧಿಸಲಾಗುವುದು.

10) ಕೆಲವು ದೂರ ಮಾರ್ಗದ ಮಾರ್ಗಗಳನ್ನು ಬೆಂಗಳೂರಿನ (12 ಸಾರಿಗೆಗಳು) ಹಾಗೂ ಮೈಸೂರಿನ (14 ಸಾರಿಗೆಗಳು) ವಿವಿಧ ಬಡಾವಣೆಗಳಿಂದ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಪ್ರಾರಂಭಿಸಲಾಗುವುದು.

11) ಕಾರ್ಯಾಚರಣೆ ಮೇಲೆ ಪರಿಣಾಮಕಾರಿ ಹಿಡಿತ ಹೊಂದಲು ಘಟಕಗಳನ್ನು ಗಣಕೀಕರಣಗೊಳಿಸಲಾಗಿದೆ.

12) ವಾಹನ, ಸಿಬ್ಬಂದಿ ಬಳಕೆ ಹೆಚ್ಚಿಸಲು ಹಾಗೂ ವೆಚ್ಚವನ್ನು ಕಡಿಮೆ ಮಾಡಲು 'ಸಿ' ಅನುಸೂಜಿಗಳ ಪರಿಷ್ಕರಣೆ.

13) ಅನುಸೂಚಿಗಳಲ್ಲಿನ ರದ್ಧತಿ ಪ್ರಮಾಣವನ್ನು ಶೂನ್ಯಕ್ಕೆ ಇಳಿಸುವುದು.

14) ವಿಳಂಬಿತ ನಿರ್ಗಮನ ಪ್ರಮಾಣವು ಶೇಕಡ 5ಕ್ಕಿಂತ ಕಡಿಮೆ ಇರುವಂತೆ ನೋಡಿಕೊಳ್ಳುವುದು.

15) ಬಸ್ಸು ನಿಲ್ದಾಣ, ಶುಚಿತ್ವ ಹಾಗೂ ಅಭಿವೃದ್ಧಿಗೊಳಿಸುವುದು.

16) ವಾಹನ ಕ್ರಮ : ಪ್ರಯಾಣಕ್ಕೆ ಶುಚಿತ್ವವಾಗಿ, ಸರಿಯಾಗಿ ಮತ್ತು ಯಾಂತ್ರಿಕವಾಗಿ ದೋಷರಹಿತವಿರುವ ಹಾಗೆ ನೋಡಿಕೊಳ್ಳುವುದು.

17) ಸುಮಧುರ ಕಾರ್ಮಿಕ ಬಾಂಧವ್ಯ ಉತ್ಪಾದನೆಯಲ್ಲಿ ತೊಡಗಿಸಿ ಕೊಳ್ಳುವುದು ಮತ್ತು ಶಿಸ್ತನ್ನು ಕಾಪಾಡಿಕೊಳ್ಳುವುದು.

ಶ್ರೀ ಯು.ಆರ್. ಸಭಾಪತಿ : ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ 15 ಕೋಟಿ ರೂಪಾಯಿಗಳ ನಷ್ಟ ಅನುಭವಿಸುತ್ತದೆ ಎಂದು ಮಾನ್ಯ ಸಚಿವರು ತಿಳಿಸಿದ್ದಾರೆ. ಇದಕ್ಕೆ ಕಾರಣಗಳೇನು ಎಂದುನನಗೆ ಗೊತ್ತಾಗಲಿಲ್ಲ? ಕಳೆದ ಎರಡು ವರ್ಷಗಳಿಂದ ಇದು ಮತ್ತಷ್ಟು ಹೆಚ್ಚಾಗಿದೆ ಎನ್ನುವಂತಹ ಸಂಶಯ ನನ್ನಲ್ಲಿದೆ. ಖರೀದಿಯಲ್ಲಿ ಅದರಲ್ಲೂ ಮುಖ್ಯವಾಗಿ ಬಿಡಿ ಭಾಗಗಳು, ಟೈರ್‌ಗಳು, ಸ್ಟಿಂಗ್‌ಗಳನ್ನು ಕೊಳ್ಳುವಲ್ಲಿ ಹಿಂದಿನಿಂದಲೂ ಸಾಕಷ್ಟು ಅವ್ಯವಹಾರ ನಡೆದು ಬಂದಿದೆ. ಇದನ್ನು ನಿಯಂತ್ರಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? ಈ 15 ಕೋಟಿ ರೂಪಾಯಿಗಳ ನಷ್ಟವನ್ನು ಸರ್ಕಾರ ಪ್ರತಿ ವರ್ಷ ಮುಂದುವರೆಸಿಕೊಂಡು ಬರುತ್ತದೆಯೇ? ಅಥವಾ ಇದನ್ನೇನಾದರೂ ಕಡಿಮೆ ಮಾಡುವಂತಹ ಲಕ್ಷಣ ಕಂಡು ಬರುತ್ತದೆಯೇ? ಎನ್ನುವುದನ್ನು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕು.

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ನಾನು 1999-2000ನೇ ಸಾಲಿನಲ್ಲಿ 15 ಕೋಟಿ 40 ಲಕ್ಷ ರೂಪಾಯಿಗಳನ್ನು ಸಾರಿಗೆ ಸಂಸ್ಥೆ ಅನುಭವಿಸಿದೆ ಎಂಬ ಉತ್ತರವನ್ನು ನಾನು ಕೊಟ್ಟಿದ್ದೇನೆ. ಇದಕ್ಕೇನು ಕಾರಣ ಎಂದು ಮಾನ್ಯ ಸದಸ್ಯರು ಈಗ ಕೇಳುತ್ತಿದ್ದಾರೆ. ಸಾರಿಗೆ ಸಂಸ್ಥೆ ವತಿಯಿಂದ ಈ ರಾಜ್ಯದಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಮತ್ತು ಇತರೆ ನಾಗರೀಕರಿಗೆ ಅನೇಕ ಪಾಸ್‌ಗಳ ಸೌಲಭ್ಯಗಳನ್ನು ಒದಗಿಸಿಕೊಡಲಾಗಿದೆ. ಇದರಿಂದಾಗಿ 180 ಕೋಟಿ ರೂಪಾಯಿಗಳ ಹೊರೆ ಸಾರಿಗೆ ಸಂಸ್ಥೆ ಮೇಲಿದೆ. ಆದರೂ ಮೊನ್ನೆ ನಡೆದ 46ನೇ ಅಖಿಲ ಭಾರತ ಸಾರಿಗೆ ಸಂಸ್ಥೆಯ ವಾರ್ಷಿಕ ಸಭೆಯಲ್ಲಿ ನಾನು ನೋಡಿದಂತೆ, ಬೇರೆ ಬೇರೆ ರಾಜ್ಯಗಳಿಗೆ ಹೋಲಿಸಿ ನೋಡಿದರೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬಹಳ ಅಲ್ಪ ಪ್ರಮಾಣದಲ್ಲಿ ಇದೆ. ಬೇರೆ ಬೇರೆ ರಾಜ್ಯಗಳಿಂದ ಸದರಿ ಸಭೆಗೆ ಬಂದಿದ್ದ ವಿವಿಧ ವ್ಯವಸ್ಥಾಪಕ ನಿರ್ದೇಶಕರು ಕೊಟ್ಟ ಮಾಹಿತಿಯಿಂದ ಇದು ನನಗೆ ತಿಳಿದು ಬಂದಿತು. ಬೇರೆ ಬೇರೆ ರಾಜ್ಯಗಳ ಸಾರಿಗೆ ಸಂಸ್ಥೆಗಳು 150-280 ಕೋಟಿ ರೂಪಾಯಿಗಳಿಗೆ ಹೆಚ್ಚಾಗಿ ನಷ್ಟವನ್ನು ಅನುಭವಿಸುತ್ತಿವೆ. ಆದರೆ ನಮ್ಮ ರಾಜ್ಯದ ಸಾರಿಗೆ ಸಂಸ್ಥೆ

ಹಿಂದಿನ ಸಾಲಿನಲ್ಲಿ ಕೇವಲ 15 ಕೋಟಿ 40 ಲಕ್ಷ ರೂಪಾಯಿಗಳ ಲುಕ್ಸಾನ್‌ನಲ್ಲಿ ನಡೆದಿದೆ. ನಾನಾ ರೀತಿಯ ಸೌಕರ್ಯಗಳನ್ನು ನಾಗರೀಕರಿಗೆ ಒದಗಿಸಿಕೊಡುವಲ್ಲಿ ನಾವು ಯಶಸ್ವಿಯಾಗಿದ್ದೇವೆ. ವಿದ್ಯಾರ್ಥಿಗಳಿಗೆ ಅನಕೂಲವಾಗುರ ರೀತಿಯಲ್ಲಿನಾವು ಬಸ್ ಪಾಸ್‌ಗಳನ್ನು ನೀಡಿದ್ದೇವೆ. ಪ್ರಯಾಣಿಕರಿಗೆ ಮಾಹೆಯಾನ, ಮೂರು ತಿಂಗಳಿಗೊಮ್ಮೆ ಮತ್ತು ಆರು ತಿಂಗಳಿಗೊಮ್ಮೆ ಪಾಸ್‌ಗಳನ್ನು ಕೊಡುವುದರಲ್ಲಿ ಮೂರು ತಿಂಗಳಿಗೊಮ್ಮೆ ಮತ್ತು ಆರು ತಿಂಗಳಿಗೊಮ್ಮೆ ಪಾಸ್‌ಗಳನ್ನು ಕೊಡುವುದರಲ್ಲಿ ನಾವು ಯಶಸ್ವಿಯಾಗಿದ್ದೇವೆ. ಅಂಧವರಿಗೆ ಮತ್ತು ಸ್ವಾತಂತ್ರ್ಯ ಹೋರಾಟಗಾರರಿಗೆ ನಾವು ಪಾಸ್‌ಗಳನ್ನು ವಿತರಣೆ ಮಾಡಿದ್ದೇವೆ. ಇದರಿಂದಾಗಿ 180 ಕೋಟಿ ರೂಪಾಯಿಗಳನ್ನು ಹೊರೆ ಸಾರಿಗೆ ಸಂಸ್ಥೆ ಮೇಲಿದೆ. ಸಂಸ್ಥೆಯ ನಷ್ಟವನ್ನು ತಡೆಗಟ್ಟಲು ಇನ್ನೂ ಹೆಚ್ಚಿನ ಬಸ್ಸಿನ ಸಂಚಾರಗಳನ್ನು ಏರ್ಪಡಿಸಲು ಕ್ರಮ ಜರುಗಿಸಲಾಗಿದೆ. ಇದರ ಜೊತೆಗೆ ಸೋರಿಕೆಯನ್ನು ತಡೆಗಟ್ಟಲು ಸಾಕಷ್ಟು ಕಾರ್ಯಕ್ರಮಗಳನ್ನು ನಾವು ಹಮ್ಮಿಕೊಂಡಿದ್ದೇವೆ. ಬಿಡಿ ಭಾಗಗಳ ಖರೀದಿ ಬಗ್ಗೆ ಅವ್ಯವಹಾರ ನಡೆದಿದೆ ಎಂದು ಮಾನ್ಯ ಸದಸ್ಯರು ಅನುಮಾನ ಪಟ್ಟಿದ್ದಾರೆ. ಬಿಡಿಭಾಗಗಳಾಗಲೀ, ವಾಸಿಗಳಾಗಲೀ ಅಥವಾ ಸಾರಿಗೆ ಸಂಸ್ಥೆಗೆ ಬೇಕಾದಂತಹ ಇತರ ಯಾವುದೇ ವಸ್ತುಗಳಾಗಲೀ, ಅವುಗಳೆಲ್ಲವನ್ನೂ ಸಂಸ್ಥೆಯು ಸರ್ಕಾರ ನಾಮ ನಿರ್ದೇಶನ ಮಾಡಿರುವಂತಹ ಸಂಸ್ಥೆಗಳಿಂದಲೇ ಖರೀದಿ ಮಾಡುತ್ತದೆ. ಡೀಸೆಲ್ ಮತ್ತು ಆಯಿಲ್‌ಗಳನ್ನೂ ಸಹಾ ಸಾರಿಗೆ ಸಂಸ್ಥೆಯು ಕೇಂದ್ರ ಸರ್ಕಾರ ನೇಮಿಸಿರುವಂತಹ ಇಂಡಿಯನ್ ಆಯಿಲ್ ಕಾರ್ಪೋರೇಷನ್‌ನಿಂದಲೆ ಖರೀದಿ ಮಾಡುತ್ತಿದ್ದೇವೆಯೇ ವಿನಃ ಬೇರೆ ಯಾವ ಕಡೆಯಿಂದಲೂ ಖರೀದಿ ಮಾಡುತ್ತಿಲ್ಲ. ಔಸಿಗಳನ್ನೂ ಸಹಾ ನೇರವಾಗಿ ಸಂಬಂಧಪಟ್ಟ ಉದ್ಯಮಿಗಳಿಂದ ಖರೀದಿ ಮಾಡುತ್ತಿದ್ದೇವೆಯೇ ವಿನಃ ಬೇರೆ ಯಾವ ಏಜೆಂಟರ ಮುಖಾಂತರವಾಗಿ ನಾವು ಖರೀದಿ ಮಾಡುತ್ತಿಲ್ಲ. ಬಿಡಿಭಾಗಗಳನ್ನು ಎಪಿ ಎಸ್ ಆರ್‌ಟಿಸಿ ಎನ್ನುವ ಸಂಸ್ಥೆ ಅವುಗಳಿಗೆ ದರ ನಿಗದಿ ಪಡಿಸಿ, ಅವುಗಳು ಉತ್ತಮ ಬಿಡಿ ಭಾಗಗಳು ಎಂದು ಗುರುತಿಸಿದ ನಂತರ ಟೆಂಡರ್ ಕರೆಯುವುದರ ಮುಖಾಂತರ ಸಾರಿಗೆಸಂಸ್ಥೆಯು ಬಿಡಿ ಭಾಗಗಳನ್ನು ಖರೀದಿ ಮಾಡುತ್ತಿದೆ. ಖರೀದಿಯಲ್ಲಿ ಏನಾದರೂ ಲೋಪದೋಷಗಳಿದ್ದಲ್ಲಿ ಅಥವಾ ಅದನ್ನು ನನ್ನ ಗಮನಕ್ಕೆ ತಂದಲ್ಲಿ ನಾನು ಆಬಗ್ಗೆ ಸೂಕ್ತ ತನಿಖೆಯನ್ನು ನಡೆಸಿ ಸಂಬಂಧಪಟ್ಟ ತಪ್ಪಿತಸ್ಥ ಅಧಿಕಾರಿಗಳನ್ನು ಶಿಕ್ಷಿಸಿರತಕ್ಕ ಸಂದರ್ಭಗಳೂ ಸಹಾ ಇವೆ. ಮಾನ್ಯ ಶಾಸಕರುಗಳಿಗೆ ಖರೀದಿಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ಏನಾದರೂ ಮಾಹಿತಿ ಇದ್ದಲ್ಲಿ ಅವರು ಅದನ್ನು ನೇರವಾಗಿ ನನ್ನ ಗಮನಕ್ಕೆ ತರಲಿ. ನಾನು ತಕ್ಷಣ ಅದಕ್ಕೆ ಸ್ಪಂದಿಸುತ್ತೇನೆ. ಅಂತಹ ಅವ್ಯವಹಾರ ನಡೆದಿದ್ದಲ್ಲಿ ಆ ಬಗ್ಗೆ ತಕ್ಷಣ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುವಂತಹ ಜವಾಬ್ದಾರಿ ನನ್ನದಾಗಿರುತ್ತದೆ. ಅಂತಹ ತನಿಖೆ ನಡೆಸಲಿಕ್ಕೆ ನಾನು ಸಿದ್ಧನಾಗಿದ್ದೇನೆ.

ಶ್ರೀ ಯು.ಆರ್.ಸಭಾಪತಿ: ಮಾನ್ಯ ಅಧ್ಯಕ್ಷರೇ, ಹೊಸ ಬಸ್ಸುಗಳನ್ನು ಈಗಾಗಲೇ ಕೆಲವು ಕಡೆಗಳಲ್ಲಿ ಓಡಿಸಲಾಗುತ್ತಿದೆ. ಹೊಸ ಬಸ್ಸುಗಳು ಬಂದ ಒಂದು ವರ್ಷದೊಳಗಾಗಿ ಅವುಗಳ ಸರಿಯಾದ ನಿರ್ವಹಣೆ ಇಲ್ಲದಿರುವ ಕಾರಣ ಬಸ್ಸುಗಳ ಟೈರ್ ಪಂಕ್ಚರ್ ಆಗುವುದು ಅಥವಾ ದಾರಿಯಲ್ಲಿ ಬಸ್ಸು ಕೆಟ್ಟು ನಿಲ್ಲುವಂತಹ ಪ್ರವೃತ್ತಿ ಹೆಚ್ಚಿಚ್ಚು ಆಗುತ್ತಿವೆ. ಒಂದು ಹೊಸ ಬಸ್ಸನ್ನು ನಾವು ಸುಮಾರು 25-30 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಖರೀದಿಸಿರುತ್ತೇವೆ. ಇಂತಹ ಹೊಸ ಬಸ್ಸು ಕನಿಷ್ಠ ಒಂದು ವರ್ಷವಾದರೂ ಕೂಡ ಬಾಳಿಕೆ ಬಾರದಿದ್ದಲ್ಲಿ ಅದರಿಂದ ಸಾರಿಗೆ ಸಂಸ್ಥೆಗೆ ಲುಕ್ಸಾನು ಆಗುವುದಿಲ್ಲವೇ? ಬಸ್ಸುಗಳ ಮೇನ್‌ಂಟೆನೆನ್ಸ್ ಮಾಡಲು ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಂಡಿದೆ ಎಂಬುದನ್ನು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕು.

ಶ್ರೀ ಸಿ.ಆರ್.ಸಗೀರ್ ಅಹ್ಮದ್ : ಮಾನ್ಯ ಅಧ್ಯಕ್ಷರೇ, ಇದಕ್ಕಾಗಿ ನಾವು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಉದಾಹರಣೆಗೆ ಹೇಳುವುದಾದರೆ, ಉತ್ತಮ ವಾಹನಗಳನ್ನು ನಾವು ಒದಗಿಸಿಕೊಡುತ್ತಿದ್ದೇವೆ. ಇದರ ಸ್ವಚ್ಛತೆಯನ್ನು ಕಾಪಾಡಿಕೊಂಡು ಹೋಗುವುದರ ಬಗ್ಗೆ ಹತ್ತಾರು ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ. ಅನೇಕ ಸಂದರ್ಭಗಳಲ್ಲಿ ಪಂಕ್ಚರ್ ಆದಾಗ ಮತ್ತು ಇತರ ತಾಂತ್ರಿಕ ಕಾರಣಗಳಿಂದ ತೊಂದರೆಯಾದಾಗ ಕೆಲವೊಮ್ಮೆ ಪ್ರಯಾಣಿಕರು ಸಹಕರಿಸಬೇಕಾಗುತ್ತದೆ. ಪಂಕ್ಚರ್ ಆಗದಿರುವುದಕ್ಕೆ ಸರ್ಕಾರವಾಗಲೀ ಅಥವಾ ನಾನಾಗಲೀ ಏನೂ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ರಸ್ತೆಯ ಮೇಲೆ ಮೊಳೆ ಅಥವಾ ಇತರ ಚೂಪಾದ ವಸ್ತುಗಳಿದ್ದಲ್ಲಿ ಅದನ್ನು ಕಂಡುಹಿಡಿಯುವುದು ಸಾಧ್ಯವಾಗುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಆಕಸ್ಮಿಕವಾಗಿ ಪಂಕ್ಚರ್ ಆಗುವುದು ಸ್ವಾಭಾವಿಕ. ಕೇವಲ ಮಂಗಳೂರು ಕಡೆಗೆ ಓಡಿಸಲಾಗುತ್ತಿರುವ ಬಸ್ಸುಗಳಲ್ಲಿ ಮಾತ್ರವಲ್ಲ ರಾಜ್ಯಾದ್ಯಂತ ಓಡಿಸಲಾಗುತ್ತಿರುವ ಹೈಟೆಕ್ ಬಸ್ಸುಗಳಲ್ಲಿ ಹೊಸ ಟೈರ್‌ಗಳನ್ನೇ ಅಳವಡಿಸಿಕೊಳ್ಳಲಾಗಿದೆ. ಪ್ರಯಾಣಿಕರಿಗೆ ತಾವು ಸೂಕ್ತ ಸಮಯಕ್ಕೆ ತಲುಪುವಂತಹ ವ್ಯವಸ್ಥೆಯನ್ನು ಒದಗಿಸಿಕೊಡಬೇಕೆಂಬುದೇ ಸಾರಿಗೆ ಸಂಸ್ಥೆಯ ಉದ್ದೇಶವಾಗಿದೆ. ಯಾವುದೇ ಬಗೆಯ ರೀಬಿಲ್ಟ್ ಟೈರ್‌ಗಳನ್ನು ಬಳಸುತ್ತಿಲ್ಲ. ಹಿಂದಿನ ಚಕ್ರಗಳಿಗೆ ನಾವು ರೀಬಿಲ್ಟ್ ಹಾಕಬಹುದೇ ವಿನಃ ನಾವು ಮುಂದಿನ ಚಕ್ರಗಳಿಗೆ ಹಾಕಲಿಕ್ಕೆ ಸಾಧ್ಯವಿಲ್ಲ. ನಾವು ಮುಂದಿನ ಚಕ್ರಗಳಿಗೆ ಹೊಸ ಟೈರ್‌ಗಳನ್ನೇ ಬಳಸುತ್ತಿದ್ದೇವೆ. ಆಕಸ್ಮಿಕವಾಗಿ ಏನಾದರೂ ತೊಂದರೆಗಳಾಗಿದ್ದಲ್ಲಿ, ಅದೂ ಸಹಾ ಇನ್ನು ಮುಂದೆ ಆಗದಂತೆ ನೋಡಿಕೊಳ್ಳುವ ಪ್ರಯತ್ನವನ್ನು ಮಾಡುತ್ತೇನೆ ಎಂಬ ಭರವಸೆಯನ್ನು ನಾನು ಮಾನ್ಯ ಅಧ್ಯಕ್ಷರ ಮೂಲಕ ಸದಸ್ಯರಿಗೆ ನೀಡಬಯಸುತ್ತೇನೆ.

11.30 ಎ.ಎಂ

ಶ್ರೀ ಎಸ್. ಸುರೇಶ್‌ಕುಮಾರ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರದಲ್ಲಿ ಅನೇಕ ಕ್ರಮಗಳನ್ನು ತೆಗೆದುಕೊಂಡಿರುವುದರ ಬಗ್ಗೆ ಅವರು ಹೇಳುತ್ತಾ, ನಷ್ಟಕ್ಕೆ ಮುಖ್ಯ ಕಾರಣ ನಮಗೆ ಗೊತ್ತಿರುವ ಪ್ರಕಾರ 17 ಕ್ರಮಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ.

ಕೆ.ಎಸ್.ಆರ್.ಟಿ.ಸಿ.ಯಲ್ಲಿ ನಷ್ಟಕ್ಕೆ ಮುಖ್ಯ ಕಾರಣ ಸೋರುವಿಕೆ. ಪ್ರತಿನಿತ್ಯ ಎಷ್ಟು ಸೋರುವಿಕೆ ಆಗುತ್ತದೆ ಎಂಬುದು ಗೊತ್ತು. ಅಂದಾಜಿನ ಪ್ರಕಾರ ಸುಮಾರು 30 ಲಕ್ಷ ರೂಪಾಯಿ ಸೋರುವಿಕೆ ಆಗುತ್ತದೆ. ಒಂದು ಬಿಟಿಎಸ್ ಬಸ್‌ನಲ್ಲಿ ಹಾಕಿದ್ದರಂತೆ 'ಅನ ಫ್ರೀ ಜಾನಾ ಫ್ರೀ ಫಕಡ್‌ಗಯೇ ತೋ ಪಾನ ಫ್ರೀ... ಅಂದರೆ ನಾವು ಜೈಲಿಗೆ ಕಳುಹಿಸುತ್ತೇವೆಂದು. ಈ ಸೋರುವಿಕೆಯನ್ನು ತಡೆಯುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ಈ 17 ಅಂಶಗಳಲ್ಲಿ ಒಂದು ಇಲ್ಲಿ ಎಷ್ಟು ಜನರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ, ಏನು ಕ್ರಮ ತೆಗೆದುಕೊಂಡಿದ್ದೀರಿ ಇದನ್ನು ವಿವರಿಸಿಲ್ಲ. ಈ ಸೋರುವಿಕೆ ನಿಲ್ಲಿಸುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಉತ್ತರ ಕೊಡಬೇಕು. ಎಷ್ಟು ಕೇಸ್ ಪೆಂಡಿಂಗ್ ಇವೆ, ಅದಕ್ಕೆ ಸಹ ಉತ್ತರ ಕೊಡಬೇಕು, ಎರಡನೆಯದು 13ನೇ ಪಾಯಿಂಟ್ ತೆಗೆಯುತ್ತೀರಿ, ಅನುಸೂಚಿಗಳಲ್ಲಿ ರದ್ದತಿ ಪ್ರಮಾಣ, ಇದನ್ನು ಶೂನ್ಯಕ್ಕೆ ಇಳಿಸುವುದು. ನೀವು ಹೇಳಿರುವುದು ಈಗಾಗಲೇ ಪರಿಣಾಮಕಾರಿ ಕ್ರಮಗಳನ್ನು ಜರುಗಿಸಿರುವುದರ ಬಗ್ಗೆ ವಿವರಗಳು ಈ ಕೆಳಕಂಡಂತಿದೆ ಎಂದು ಹೇಳಿದ್ದೀರಿ. ಶೂನ್ಯ ಪರ್ಸೆಂಟೇಜ್ ಯಾವಾಗ ತರುತ್ತೀರಿ ಒಂದು ಅಂದಾಜಿನ ಪ್ರಕಾರ 8-10 ಪರ್ಸೆಂಟ್ ಇರುವುದನ್ನು ಸೊನ್ನೆ ಪರ್ಸೆಂಟಿಗೆ ಯಾವಾಗ ತರುತ್ತೀರಿ? ಇದರ ಬಗ್ಗೆ ಉತ್ತರ ಕೊಡಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಸನ್ಮಾನ್ಯ ಅಧ್ಯಕ್ಷರೆ, ಸೋರುವಿಕೆ ತಡೆಯುವುದಕ್ಕೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಜಾಗೃತ ದಳ ಎಂದು ನಮ್ಮ ಸಂಸ್ಥೆಯಲ್ಲಿ ಇದೆ. ನಿರ್ವಾಹಕನ . ನಿರ್ವಹಣೆಯಲ್ಲಿ ಕೆಲವೊಮ್ಮೆ ಕೆಲವು ತಪ್ಪುಗಳು ಆದ ಸಂದರ್ಭದಲ್ಲಿ ಜಾಗೃತ ದಳದವರು ಹಿಡಿದು ಅವನ ಮೇಲೆ ತನಿಖೆ ನಡೆಸುವುದರ ಜೊತೆಗೆ ಅಮಾನತ್ತಿನಲ್ಲಿಡುವ ಕಾರ್ಯಕ್ರಮ ಹಾಕಿಕೊಳ್ಳುತ್ತಾರೆ. ಒಂದು ಪಕ್ಷ ತನಿಖಾ ಹಂತದಲ್ಲಿ ಅವನು ಮಾಡಿರುವಂತಹ ನಿರ್ವಹಣೆಯಲ್ಲಿ ವ್ಯತ್ಯಾಸ ಕಂಡುಬಂದು ಸಾಬೀತು ಆದಾಗ ಪಜಾ ಮಾಡುವುದು, ಅನೇಕ ಸಂದರ್ಭದಲ್ಲಿ ನಡೆಯುತ್ತಿದೆ. ಇದನ್ನು ಸರಿಪಡಿಸುವುದೆಂದರೆ, ನನಗೆ ತಿಳಿದ ಹಾಗೆ ನಮ್ಮಲ್ಲಿ ಆ ನಿರ್ವಹಣೆ ಹೊತ್ತಿರುವಂತಹ ನಿರ್ವಾಹಕರ ಮೇಲೆ ಒಬ್ಬೊಬ್ಬರ ಮೇಲೆ 60, 65, 70ಕ್ಕಿಂತ ಹೆಚ್ಚು ಮೊಕದ್ದಮೆ ಇರುವುದು ನನ್ನ ಗಮನಕ್ಕೆ ಬಂದಿದೆ. ಅವರಿಗೆ ನಾವು ನೌಕರಿ ಕೊಟ್ಟಿಲ್ಲ. ನೀವು ಹಿಂದಿಯಲ್ಲಿ ಹೇಳಿದ ಹಾಗೆ. '' ಖಾನೆಕೋಭಿ ಹೋತನ್ಯೆ, ದೇನೋಕೋಭಿ ಹೋತಾನ್ಯೆ ಲೇನೇಕೋಜಿ ಹೋತನ್ಯೆ.. . ಎಂದು ನಾನು ಹೇಳಬೇಕಾಗುತ್ತದೆ. ಅಲ್ಲಿನ ವಿಚಾರ ಬೇರೆ. ಇಲ್ಲಿನ ವಿಚಾರ ಬೇರೆ ಇದೆ. ಏಕೆಂದರೆ ಸೋರುವಿಕೆ ತಡೆಯುವುದರಲ್ಲಿ ನಾವು ಯಶಸ್ವಿಯಾಗಿದ್ದೇವೆಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ನಾನು ಸಾರಿಗೆ ಮಂತ್ರಿಯಾಗಿದ್ದಾಗ ಮಾನ್ಯ ಸಿಂಧ್ಯಾರವರು, ಮಾನ್ಯ ಬಚ್ಚೇಗೌಡರು ಸಾರಿಗೆ ಸಚಿವರಾಗಿದ್ದಾಗ ಸಹ ನಮ್ಮ ಮುಂದೆ 60,000ಕ್ಕೂ ಹೆಚ್ಚು ನಿರ್ವಾಹಕರ ಮೇಲೆ ಮೊಕದ್ದಮೆಗಳನ್ನು ಹೂಡಿದ್ದೇವೆ. ನ್ಯಾಯಾಲಯದಲ್ಲಿ ಹೂಡಿರುವ ಕೆಲವು ಮೊಕದ್ದಮೆಗಳು ನಮ್ಮ ಅಧಿಕಾರಿಗಳ ಮುಂದೆ ತನಿಖಾ ಹಂತದಲ್ಲಿರುವುದು ಇದೆ. ಈ ಸೋರುವಿಕೆಯನ್ನು ತಡೆಯುವುದಕ್ಕೆ ಎಲ್ಲ ಪ್ರಯತ್ನಗಳನ್ನು ನಡೆಸುತ್ತಿದ್ದೇವೆ. ಕ್ಯಾನ್ಸಲೇಷನ್ ಪರ್ಸೆಂಟೇಜ್‌ನಲ್ಲಿ 0. 16 ಇದೆ. ಅದು ಇನ್ನು ಕಡಿಮೆ ಮಾಡುವುದರ ಬಗ್ಗೆ ನಾವು ಜಾಗೃತ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಈ ಹಿಂದೆ ಸಿಬ್ಬಂದಿ ವರ್ಗದವರ ಕೊರತೆ ಇತ್ತು. ನಾವು 5325 ಜನ ಸಿಬ್ಬಂದಿಯವರನ್ನು ನೇಮಿಸಿಕೊಂಡಿದ್ದೇವೆ. ಸಮಯ ಸಂದರ್ಭಕ್ಕೆ ಬಸ್ ಸಂಚಾರ ಆಗುವುದರ ಜೊತೆಗೆ ಇನ್ನು ಮುಂದೆ ಕ್ಯಾನ್ಸಲೇಷನ್ ಇನ್ನು ಕಡಿಮೆ ಆಗುವಂತೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಇಲ್ಲಿ ಮುಖ್ಯವಾಗಿ ಪ್ರಸ್ತಾಪ ಮಾಡುವುದು ಮಾನ್ಯ ಸಿಂಧ್ಯರವರು ಸಾರಿಗೆ ಮಂತ್ರಿಯಾದ ಸಂದರ್ಭದಲ್ಲಿ ಎಫಿಷಿಯೆನ್ಸಿಗಾಗಿ ಮತ್ತು ಬೇರೆ ಬೇರೆ ರೀಜನ್‌ಲ್‌ವೈಸ್ ಜೆನಿಫಿಟ್ ಆಗಲಿ ಎನ್ನುವ ದೃಷ್ಟಿಯಿಂದ ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮತ್ತು ಈಶಾನ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಎಂದು ಮಾಡಿದ್ದರು. ಅದರ ಉದ್ದೇಶ ಸ್ವತಂತ್ರವಾಗಿ ಕಾರ್ಯನಿರ್ವಹಿಸುವುದಾಗಿತ್ತು. ಆದರೆ ಇವತ್ತು ಆ ಸ್ವತಂತ್ರ್ಯ ಕಾರ್ಯನಿರ್ವಹಣೆ ಆಗುತ್ತಿಲ್ಲ. ಅದಕ್ಕೆ ಒಬ್ಬೊಬ್ಬರು ಎಂ. ಡಿ. ಇದ್ದರು, ಅವರು ಸ್ವತಂತ್ರವಾಗಿ ನಿರ್ಣಯ ತೆಗೆದುಕೊಳ್ಳುತ್ತಿಲ್ಲ. ಯಾವುದೇ ಐಟಂ ಪರ್ಚೇಸ್ ಡಿಸಿಷನ್ ತೆಗೆದುಕೊಳ್ಳಬೇಕಾದರೆ ಎಂ. ಡಿ. ಯವರಿಗೆ ಹಕ್ಕು ಇಲ್ಲ. ನಿಮ್ಮ ಹೆಡ್ ಆಫೀಸ್‌ಗೆ ಬರಬೇಕು, ಬೆಂಗಳೂರಿನಲ್ಲಿ ನೀವು ಡಿಸಿಷನ್ ತೆಗೆದುಕೊಳ್ಳುವುದಾದರೆ ವಾಯುವ್ಯ ಮತ್ತು ಈಶಾನ್ಯ ಸಾರಿಗೆ ವ್ಯವಸ್ಥೆ ಏಕಿರಬೇಕು? ಸ್ವತಂತ್ರ ನಿರ್ವಹಣೆ ಮಾಡುವುದಕ್ಕೆ ಅಧಿಕಾರ ಕೊಡಿ. ಎಂ. ಡಿ. ಯವರಿಗೆ ಪೂರ್ತಿ ಅಧಿಕಾರ ಕೊಡಿ ಇದು ಒಂದು. ಎರಡನೆಯದಾಗಿ ಆ ವಿಭಾಗಕ್ಕೆ ಏನು ಪ್ರಾಫಿಟ್ ಆಗುತ್ತದೆ ಅದು ಆಯಾ ವಿಭಾಗಕ್ಕೆ ಖರ್ಚಾಗಬೇಕು. ನೀವು ಎಲ್ಲಿ ಕೆ.ಎಸ್.ಆರ್.ಟಿ.ಸಿ. ಲಾಸ್ ಆಗಿದೆ ಅಲ್ಲಿ ಖರ್ಚು ಮಾಡಿದರೆ ಅವು ಉದ್ದಾರವಾಗುವುದಿಲ್ಲ. ಅದರ ಬಗ್ಗೆ ನೀವು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ನಾಲ್ಕು ನಿಗಮಳಾಗಿ ನಾವು ಏನು ವಿಂಗಡಣೆ ಮಾಡಿದ್ದೇವೆ ಅದರ ನಿರ್ವಹಣಾ ಜವಾಬ್ದಾರಿ ಆ ನಿಗಮಕ್ಕೆ ಕೊಡುವ ಬಗ್ಗೆ ನನ್ನಮ್ಮ ಮುಂದೆ ಪ್ರಸ್ತಾವನೆ ಇದೆ, ಈ ವಿಚಾರದಲ್ಲಿ ಕೆಲವೇ ದಿನಗಳಲ್ಲಿ ನಾವು ತೀರ್ಮಾನ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಇವತ್ತು ಏನೇ ಐಟಂ ಪರ್ಚೇಸ್ ಮಾಡಬೇಕೆಂದರೆ ಬೆಂಗಳೂರಿಗೆ ಬರಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಆರ್ಥಿಕವಾಗಿ ಲಾಭ ನಷ್ಟದ ವಿಚಾರ ಅವರ ನಿರ್ವಹಣೆ ಅವರ ನಿಗಮದ ವ್ಯಾಪ್ತಿಯಲ್ಲಿ ನಡೆಸಿಕೊಂಡು ಹೋಗುವ ಅಧಿಕಾರ ಅವರಿಗೆ ಕೊಟ್ಟಿದ್ದೇವೆ. ಕೇವಲ ಕೆಲವು ಬಿಡಿ ಭಾಗಗಳನ್ನು ಖರೀದಿ ಮಾಡುವ ಜವಾಬ್ದಾರಿ ಸಾರಿಗೆ ಇಲಾಖೆ ವಹಿಸಿಕೊಂಡಿರುವುದರಿಂದ ಸಮಸ್ಯೆಯಾಗುತ್ತದೆ. ಅದನ್ನು ಹಂಚಿಕೆ ಮಾಡುವುದರ ಬಗ್ಗೆ ಇಲಾಖೆ ಕ್ರಮ ತೆಗೆದುಕೊಳ್ಳುವಂತೆ ಸೂಚಿಸುತ್ತೇನೆ.

ಶ್ರೀ ಸಿ.ಬೈರೇಗೌಡ : ಇರತಕ್ಕಂಥಹ ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ಒಂದು ಬಹಳ ನಷ್ಟ ದಲ್ಲಿದೆ 15. 14 ಕೋಟಿ ನಷ್ಟದಲ್ಲಿದೆ. ಕೆಲವು ಲಾಭದಲ್ಲಿ ಕೂಡ ಇದೆ. ಈ ವಿಚಾರದಲ್ಲಿ ಇವತ್ತು ದೇಶದಲ್ಲಿ ಆಲೋಚನೆಯನ್ನು ಏನಾದರೂ ಈ ವಿಚಾರದಲ್ಲಿ ನಮ್ಮ ರಸ್ತೆ ಸಾರಿಗೆಯ ವ್ಯವಸ್ಥೆಯಲ್ಲಿ ಸರ್ಕಾರ ಆಲೋಚನೆ ಮಾಡಿದೆಯಾ? ತಮ್ಮ ನೇತಾರರು ದೆಹಲಿಯಲ್ಲಿದ್ದಾಗ ಅದನ್ನು ಉದಾರೀಕರಣ, ಪ್ರೈವಟೈಸೇಷನ್, ಗ್ಲೋಬಲೈಸೇಷನ್ ಇವೆಲ್ಲ ದೊಡ್ಡ ದೊಡ್ಡ ಪದಗಳನ್ನು ತಾವು ಬಳಕೆಗೆ ತಂದಿದ್ದೀರಿ. ಅದರ ಪ್ರಕಾರ ಈ ಸರ್ಕಾರ ಕೂಡ ಕ್ರಮ ತೆಗೆದುಕೊಳ್ಳತಕ್ಕಂಥಾದ್ದು ನೋಡಿದ್ದೇವೆ. ಈ ವಿಚಾರದಲ್ಲಿ ಏನು ಹೇಳುತ್ತೀರಿ? ಇದನ್ನು ಕೂಡ ಪ್ರೈವೇಟೈಸೇಷನ್ ಮಾಡತಕ್ಕಂತಹ ಅಭಿಪ್ರಾಯ. ಆಲೋಚನೆ ಸರ್ಕಾರಕ್ಕೆ ಇದೆಯಾ?

ಶ್ರೀ ಸಿ.ಆರ್. ಸಗೀರ್ ಅಹಮದ್ : ಸನ್ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಬೈರೇಗೌಡರು ಖಾಸಗೀಕರಣದ ಬಗ್ಗೆ ತಮ್ಮ ಆಲೋಚನೆ ಇದೆಯಾ ಎಂದು ಪ್ರಸ್ತಾಪ ಮಾಡಿದ್ದಾರೆ. ಸದ್ಯಕ್ಕೆ ನನ್ನ ಮುಂದೆ ಖಾಸಗೀಕರಣದ ವಿಚಾರ ಇಲ್ಲ.

ಶ್ರೀ ಬಿ.ಎನ್.ಬಚ್ಚೇಗೌಡ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರ ಹೇಳಿಕೆ ಏನಿದೆ, ಈ 15 ಕೋಟಿ ರೂಪಾಯಿ ನಷ್ಟವಾಗಿದೆ ಎನ್ನುವುದು ಇದು ಸರಿಯಾದ ಮಾಹಿತಿ ಅಲ್ಲ. ನಷ್ಟವಾಗುತ್ತಿರತಕ್ಕಂಥದ್ದು ಮ್ಯಾಕ್ಸಿ ಕ್ಯಾಬ್ ಜೊತೆ ಕಾಂಪಿಟಿಷನ್ ಮಾಡಿಕೊಂಡು ಸರ್ಕಾರಿ ಬಸ್ಸುಗಳ ಜೊತೆಯಲ್ಲಿ ಮ್ಯಾಕ್ಸಿ ಕ್ಯಾಬ್ ಇದೆ, ಪ್ರೈವೇಟ್ ಬಸ್ ಇದೆ, ಹತ್ತಾರು ಪರ್ಮಿಟ್‌ಲೆಸ್ ವಾಹನಗಳು ಪೋಲಿಸ್ ಪರ್ಮಿಟ್‌ನಲ್ಲಿ ಓಡುತ್ತವೆ, ಆಟೋರಿಕ್ಷಾಗಳು ರೂರಲ್ ಏರಿಯಾದಲ್ಲಿ ಹೋಗುತ್ತಿವೆ. ಈ ರೀತಿ ನಷ್ಟಕ್ಕೆ ಕಾರಣವಾಗಿದೆ. ಈ ಸರ್ಕಾರ ಬಂದ ಮೇಲೆ ಸರಿ ಸಮಾನವಾಗಿ ಲಾಭಕ್ಕೆ ಬರಬೇಕೆಂದು ಎರಡು ಸಾರಿ ಪ್ರಯಾಣ ದರ ಏರಿಸಿದರು. ಎರಡು ಸಾರಿ ಪ್ರಯಾಣ ದರ ಏರಿಸಿದರೂ ಸಹ 15ಕೋಟಿ ನಷ್ಟ ತೋರಿಸುತ್ತಿದ್ದಾರೆ. 128 ಡಿಪೋಗಳಲ್ಲಿ 80-90 ರಷ್ಟು ಡಿಪೋಗಳು ನಷ್ಟದಲ್ಲಿವೆ. ಕೋಲಾರ ಡಿವಿಷನಲ್ ಆಫೀಸ್ ಆರು ಕೋಟಿ ನಷ್ಟದಲ್ಲಿದೆ. ಬೆಂಗಳೂರು ಕೇಂದ್ರೀಯ ವಿಭಾಗ ನಷ್ಟದಲ್ಲಿದೆ. ರಾಯಚೂರು ತುಮಕೂರು ಈ ಡಿವಿಷನ್‌ಗಳೂ ನಷ್ಟದಲ್ಲಿವೆ. ಮಂಗಳೂರು ಮತ್ತು

ಮೈಸೂರು ದಿವಿಷನ್‌ಗಳೂ ನಷ್ಟದಲ್ಲಿವೆ. All Divisional Offices and Depots are under loss. Tax reliefs. ನಮ್ಮ ಸರ್ಕಾರ ಇದ್ದಾಗ ಎಂಟು ಪರ್ಸೆಂಟ್ ಇದ್ದು ಯದು ಪರ್ಸೆಂಟ್‌ಗೆ ತೆಗೆದುಕೊಂಡು ಬಂದಿದ್ದೆವು. ಸಿಟಿಯಲ್ಲಿ ಐದು ಕೋಟಿ ಇದ್ದುದು ಮೂರು ಕೋಟಿಗೆ ತೆಗೆದುಕೊಂಡು ಬಂದು ಲಾಸ್ ಇದೆ ಎಂದು ಹೇಳಿ, ಈಶಾನ್ಯ ಮತ್ತು ವಾಯುವ್ಯ ನಿಗಮಗಳಲ್ಲಿ ನಷ್ಟ ಇದೆ ಎನ್ನುವುದಕ್ಕೆ ನಾನಾ ವಿಧದಲ್ಲಿ ನೋಡುವಿಕೆಯೇ ಕಾರಣ ಬೇರೆ ರೀತಿಯಲ್ಲಿ ಕಾಂಪಿಟಿಷನ್ ಬರುತ್ತದೆ. ಪ್ರಯಾಣಿಕರು ಬೇರೆ ಬೇರೆ ವಾಹನಗಳಲಿ ಪ್ರಯಾಣ ಮಾಡಲು ಆಸಕ್ತಿ ತೋರಿಸುತ್ತಾರೆ. ಇನ್ನು ಸರ್ಕಾರ ಸಾರಿ ಸಂಸ್ಥೆಯನ್ನು ಖಾಸಗೀಕರಣ ಮಾಡುವುದಿಲ್ಲವೆಂದು ಏನು ಹೇಳಿದ್ದಾರೆ ಅದು ಸರಿಯಾದ ತೀರ್ಮಾನವಾಗಿದೆ. ಹಿಂದಿನ ಸದನದಲ್ಲಿ ಖಾಸಗೀಕರಣದ ಬಗ್ಗೆ ಯೋಚನೆ ಮಾಡಲಾಗುವುದು ಎಂದಿದ್ದನ್ನು ಈಗಿನ ಸದನದಲ್ಲಿ ಪ್ರಸ್ತಾಪಿಸಿದಾಗ ಮಾನ್ಯ ಮುಖ್ಯಮಂತ್ರಿಗಳೇ ತಮ್ಮ ಸರ್ಕಾರದ ನಿರ್ಧಾರವನ್ನು ಖಾಸಗೀಕರಣ ಮಾಡುವುದಿಲ್ಲವೆನ್ನುವ ಮೂಲಕ ವ್ಯಕ್ತಪಡಿಸಿರುವುದು ಸಂತೋಷದ ವಿಚಾರವಾಗಿದೆಯೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಇದರ ಬಗ್ಗೆ ಮಾನ್ಯ ಸಾರಿಗೆ ಮಂತ್ರಿಗಳು ಕೂಡ ಅಭಿಪ್ರಾಯವನ್ನು ಹೇಳಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ನಾನು ಪತ್ರಿಕಾ ಸಂದರ್ಶನ ಕೊಟ್ಟ ಯಾವುದೇ ಸಂದರ್ಭದಲ್ಲಾಗಬಹುದು, ಜಿಲ್ಲೆಗಳಿಗೆ ಭೇಟಿ ಕೊಟ್ಟ ಸಂದರ್ಭದಲ್ಲಿಯೇ ಆಗಿರಬಹುದು. ಯಾವುದೇ ಸಂದರ್ಭದಲ್ಲೂ ಕೂಡ ಖಾಸಗೀಕರಣ ವಿಚಾರದ ಬಗ್ಗೆ ತಿಳಿಸಿಯೇ ಇಲ್ಲ. ಖಾಸಗೀಕರಣ ಮಾಡುತ್ತೇವೆಂದು ಎಲ್ಲಿಯೂ ನಾನು ಹೇಳಿಲ್ಲ. ಕರ್ನಾಟಕ ರಾಜ್ಯದಲ್ಲಿ ಸುಮಾರು 16 ಸಾವಿರಕ್ಕೂ ಹೆಚ್ಚು ಮ್ಯಾಕ್ಸಿಕ್ಯಾಬ್‌ಗಳು ಇವೆ. ಹಿಂದಿನ ಸರ್ಕಾರದಲ್ಲಿಯೇ ಮ್ಯಾಕ್ಸಿಕ್ಯಾಬ್‌ಗಳಲ್ಲಿ ಹನ್ನೆರಡು ಜನ ಪ್ರಯಾಣಿಕರು ಮತ್ತು ಒಬ್ಬ ಡ್ರೈವರ್ ಸೇರಿದಂತೆ ಒಟ್ಟು 13 ಜನರು ಪ್ರಯಾಣಿಸಲು ಅನುಮತಿಯನ್ನು ಕೊಟ್ಟಿದ್ದಾರೆ. ಈಗ ಬಸ್ಸಿನ ಸಂಖ್ಯೆಯನ್ನು ಜಾಸ್ತಿ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ದಿನನಿತ್ಯ ಮಾರ್ಗಗಳನ್ನು ಹೆಚ್ಚು ಮಾಡುತ್ತಿದ್ದೇವೆ. ಮುಂದೆ ಕೂಡ ಮಾರ್ಗಗಳನ್ನು ಮತ್ತು ಬಸ್ಸಿನ ಸಂಖ್ಯೆಯನ್ನು ಹೆಚ್ಚು ಮಾಡಬಹುದು. ಆಟೋರಿಕ್ಷಾಗಳ ಸಂಖ್ಯೆಯೂ ಕುಡ ದಿನನಿತ್ಯ ಜಾಸ್ತಿಯಾಗುತ್ತಿದೆ. ನನ್ನ ವ್ಯಾಪ್ತಿಗೆ ಬರುವ ಅಧಿಕಾರದಲ್ಲಿ ಕೆಲವೊಂದು ತೀರ್ಮಾನವನ್ನು ನಾನು ತೆಗೆದುಕೊಳ್ಳುತ್ತೇನೆ. ಆದರೆ ಕೆಲವು ತೀರ್ಮಾನಗಳನ್ನು ಕೇಂದ್ರ ಮೋಟಾರು ವಾಹನ ಕಾಯಿದೆಯಡಿಯಲ್ಲಿ ಕೇಂದ್ರ ಸರ್ಕಾರ ತೀರ್ಮಾನ ಮಾಡಬೇಕು. ಹಿಂದೆ ಆಟೋರಿಕ್ಷಾದಲ್ಲಿ ಮೂರು ಜನರು ಏನು ಪ್ರಯಾಣಿಸುತ್ತಿದ್ದರು ಆ ರೀತಿಯ ಆಟೋಗಳ ಜೊತೆಗೆ ಹೊಸದಾಗಿ ಬಂದಿರುವ ಆಟೋದಲ್ಲಿ ಏಳು ಜನರು ಪ್ರಯಾಣಿಸಬಹುದೆಂದು ಕೇಂದ್ರ ಸರ್ಕಾರ ತೀರ್ಮಾನ ಮಾಡಿ ಆದೇಶ ನೀಡಿದೆ. ಈ ಆದೇಶದ ಪ್ರಕಾರ ಹೊಸ ಆಟೋರಿಕ್ಷಾಗಳಿಗೆ ಅನುಮತಿಯನ್ನು ಕೊಡಬೇಕಾಗುತ್ತದೆ. ಇಂದು ದಿನನಿತ್ಯ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿ ಒತ್ತಡ ಹೆಚ್ಚಾಗುತ್ತಿರುವುದರಿಂದ ನಾನು ಎಲ್ಲಾ ರೀತಿಯಲ್ಲಿ ಸಹಕಾರ ಮಾಡಬೇಕಾಗುತ್ತದೆ. ಆದರೆ ನಷ್ಟವಾಗುವುದನ್ನು ತಡೆಯುವುದರ ಬಗ್ಗೆ ನಾವು ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಯಾವ ಮಾಹಿತಿಯನ್ನಾದರೂ ಯಾವ ಸಂದರ್ಭದಲ್ಲಾದರೂ ಪಡೆಯಲು ಸದನದ ಸದಸ್ಯರಿಗೆ ಹಕ್ಕಿದೆ. ಆ ನೀತಿಯ ಪ್ರಕಾರ ಲಾಭ - ನಷ್ಟದ ವಿವರಗಳ ಪಟ್ಟಿಯನ್ನು ಮುಂದಿನ ವರ್ಷದಲ್ಲಿ ಈ ಸದನದ ಮುಂದೆ ಇಡಲು ನಾನು ಸಿದ್ಧನಾಗುತ್ತೇನೆ. ಈಗ ಇರುವ ನಾಲ್ಕು ನಿಗಮಗಳಲ್ಲಿ ಎರಡು ಲಾಭದಲ್ಲಿ

ಮತ್ತು ಎರಡು ನಷ್ಟದಲ್ಲಿ ನಡೆಯುತ್ತಿವೆ. ಇದಕ್ಕೆ ಎಲ್ಲಾ ರೀತಿಯ ಸುಧಾರಣೆಗಳನ್ನು ತರಲು ನಾನು ಪ್ರಯತ್ನಗಳನ್ನು ಮಾಡುತ್ತಿದ್ದೇನೆಂದು ಸದನದಲ್ಲಿ ಅಧ್ಯಕ್ಷರ ಮೂಲಕ ಎಲ್ಲಾ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಎಸ್.ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ಈಗ ಕೊಟ್ಟಿರುವ 17 ಉತ್ತರದಲ್ಲಿ ಪಾರದರ್ಶತತೆಯನ್ನು ತೋರಿಸುವ ಸಲುವಾಗಿ ಸ್ಟೋರ್ಸ್‌ಗೆ ಸಂಬಂಧಪಟ್ಟಂತೆ ಎಲ್ಲಾ ಹಂತದಲ್ಲೂ ಕಂಪ್ಯೂಟರೀಕರಣಗೊಳಿಸುವ ಬಗ್ಗೆ ಎಲ್ಲಿಯೂ ಹೇಳಿಯೇ ಇಲ್ಲ. ಇದರ ಬಗ್ಗೆ ಸಚಿವರು ಯಾವ ಯೋಜನೆಯನ್ನು ಹಾಕಿಕೊಂಡಿದ್ದಾರೆ ಎಂಬ ಬಗ್ಗೆ ತಿಳಿಸಬೇಕು. ಸಂಸ್ಥೆ ಕೇವಲ ಲಾಭವನ್ನು ಮಾತ್ರ ನೋಡದೇ ಸೇವೆಯ ಕಡೆ ಕೂಡ ಗಮನ ಕೊಡಬೇಕು. ಇಂದು ಮಂಗಳೂರು ವಿಭಾಗ ಲಾಭದಲ್ಲಿಯೇ ಇದೆ. ಇಂದು ಎಲ್ಲಾದರೂ ಪ್ರಯಾಣಿಕರ ಬಸ್ ಎಲ್ಲಾದರೂ ಪಂಕ್ಚರ್ ಅಥವಾ ಇನ್ನಿತರ ಕಾರಣಗಳಿಂದ ಕೆಟ್ಟುನಿಂತರೆ ಮತ್ತೊಂದು ಸಾರಿಗೆ ಸಂಸ್ಥೆಯ ಬಸ್ ಬರುವ ತನಕ ಕಾದು ಕುಳಿತುಕೊಳ್ಳಬೇಕಾದ ಪರಿಸ್ಥಿತಿ ಇದೆ.

ಅಧ್ಯಕ್ಷರು : ಅದು ಡಿಪರೆಂಟ್ ಇಶ್ಯೂ ಪ್ರಶ್ನೆಯಾಗುತ್ತದೆ. ಸಚಿವರು ಅವರ ಮೊದಲಿನ ಪ್ರಶ್ನೆಗೆ ಉತ್ತರಿಸಬೇಕು.

ಶ್ರೀ ಸಿ.ಆರ್.ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ಕರ್ನಾಟ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಸೇರಿದಂತೆ ಮತ್ತು ಇನ್ನು ಮೂರು ಮಂಡಳಿಗಳು ಸೇರಿದಂತೆ ಎಲ್ಲಾ ಕಡೆಯಲ್ಲಿಯೂ ಕಂಪ್ಯೂಟರೀಕರಣ ಮಾಡಲು ಸುಮಾರು 7 ಕೋಟಿ ರೂಪಾಯಿಗಳ ಯೋಜನೆಯನ್ನು ಹಮ್ಮಿಕೊಂಡಿದ್ದು ಈಗಾಗಲೇ ಎರಡು ಕೊಟಿ 60 ಲಕ್ಷ ರೂಪಾಯಿ ಗಳನ್ನು ಖರ್ಚು ಮಾಡಲಾಗಿದೆ. ಜಿಲ್ಲಾ ಕೇಂದ್ರಗಳಲ್ಲಿ ರಿಸರ್ವೇಶನ್ ಕೌಂಟರ್‌ನ್ನು ಕಂಪ್ಯೂಟರೀಕರಣದ ಮೂಲಕ ಮಾಡುವ ಬಗ್ಗೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಖರೀದಿ ಸಮಿತಿ ಬಗ್ಗೆ ಕೂಡ ಕಂಪ್ಯೂಟರೀಕರಣ ಮಾಡಲು ನಮ್ಮ ಮುಂದೆ ಕಾರ್ಯಕ್ರಮ ಇದೆ. ಈ ಗಣಕೀಕರಣ ವ್ಯವಸ್ಥೆಯನ್ನು ಆ ಭಾಗದಲ್ಲಿ ಒದಗಿಸಿ ಕೊಡಲಾಗುತ್ತದೆ.

ಮಿನಿ ವಿಧಾನ ಸೌಧ ನಿರ್ಮಾಣ

120 (1283) ಶ್ರೀ ಗುಂಡಪ್ಪ ವಕೀಲ (ಔರಾದ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. '' ಮಿನಿ ವಿಧಾನ ಸೌಧ'' ನಿರ್ಮಾಣಕ್ಕಾಗಿ ಸುಮಾರು 10 ವರ್ಷಗಳಿಂದ 5 ಎಕರೆ ಜಮೀನು ಔರಾದ ನಗರದಲ್ಲಿ ಸ್ವಾಧೀನಪಡಿಸಿಕೊಂಡಿರುವುದು ಸರ್ಕಾರಕ್ಕೆ ತಿಳಿದಿದೆಯೆ;

2. '' ಮಿನಿ ವಿಧಾನ ಸೌಧ'' ನಿರ್ಮಾಣಕ್ಕಾಗಿ ಸರ್ಕಾರ ಕೈಗೊಂಡ ಕ್ರಮವೇನು;

3. ಈ ವರ್ಷದ ಹಣಕಾಸು ಯೋಜನೆಯಲ್ಲಿ ಇಂತಹ ನಿರ್ಮಾಣ ಕಾರ್ಯ ಆಳವಡಿಸಲಾಗಿದೆಯೇ;

4. ಇಲ್ಲಿಯವರೆಗೆ ಒದಗಿಸಿದ ಹಣವೆಷ್ಟು?